2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ133/2018

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಭೈರಮ್ಮ | ಪಿಡಬ್ಲೂ-3 |
| ಗಂಡನ ಹೆಸರು | - | ಭೈರಯ್ಯ | ಸಿಡಬ್ಲೂ -5 |
| ವಯಸ್ಸು | - | 60 ವರ್ಷ | |
| ಉದ್ಯೋಗ | - | ಕೂಲಿಕೆಲಸ | |
| ವಾಸ ಸ್ಥಳ | - | ಕೋಗಿಲೆ ಮನೆ | |

ದಿನಾಂಕಃ 20.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿ ತೀರ್ಥ ಗೊತ್ತು ಆತ ನನ್ನ ಅಕ್ಕನ ಮಗಳಾದ ಹೇಮಲತಾಳ ಗಂಡ. ಚಾಸಾ.6 ನನ್ನ ಅಕ್ಕ. ಮೃತ ಹೇಮಲತಾ ಚಾಸಾ.6 ರವರ ಮಗಳು. ಚಾಸಾ.2 ರಿಂದ 4 ರವರು ಗೊತ್ತಿಲ್ಲ. ಚಾಸಾ.7 ಸಹ ಚಾಸಾ.6 ರವರ ಮಗಳು. ಚಾಸಾ.8, 9, 11 ರವರು ನನ್ನ ಸಂಬಂಧಿ. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. ಹೇಮಲತಾ ಈಗ ಬದುಕಿಲ್ಲ. ಆಕೆ ಈಗ್ಗೆ 4 ವರ್ಷಗಳ ಹಿಂದೆ ಮೃತಪಟ್ಟಿದ್ದಾಳೆ. ಆಕೆ ಹಾಸನದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ. ಆರೋಪಿ ಕುಡಿದುಕೊಂಡು ಬಂದು ತನ್ನ ಹೆಂಡತಿಯಾದ ಹೇಮಲತಾಳೊಂದಿಗೆ ಜಗಳ ಮಾಡಿ, ಆಕೆಗೆ ಹೊಡೆದು, ಹಿಂಸೆ ಕೊಟ್ಟು , ಹೇಮಲತಾಳನ್ನು ಕುರಿತು ನೀನು ಇರುವುದು ಬೇಡ, ಎಲ್ಲಾದರೂ ಹೋಗು, ಎಲ್ಲಾದರೂ ಹೋಗಿ ಸಾಯಿ ಎಂದು ಹೇಳಿದ್ದರಿಂದ ಹೇಮಲತಾ ಯಾರ ಸಹವಾಸವೂ ಬೇಡವೆಂದು

ಇಲಿಯ ಔಷದಿಯನ್ನು ಕುಡಿದಿರುತ್ತಾಳೆ. ಆಕೆಯನ್ನು ಮೊದಲಿಗೆ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ನಾನು ಅಲ್ಲಿಗೆ ಹೋಗಿದ್ದೆನು. ಆದರೆ ಹೇಮಲತಾ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ, ಸುಸ್ತಾಗಿದ್ದಳು. ಆಕೆಯನ್ನು ಒಂದು ರಾತ್ರಿ ಸದರಿ ಆಸ್ಪತ್ರೆಯಲ್ಲಿಯೇ ಇರಿಸಿ ಚಿಕಿತ್ಸೆ ಕೊಡಿಸಲಾಗಿತ್ತು.

3. ನಂತರ ಹೇಮಲತಾಳನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡುವಷ್ಟರಲ್ಲಿ ಆಕೆ ಮೃತಪಟ್ಟಳು. ನಾನು ಹಾಸನದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆನು. ಅಲ್ಲಿ ಹೇಮಲತಾಳ ಶವವನ್ನು ನೋಡಿದ್ದೇನೆ. ಆಗ ನನ್ನ ಜೊತೆ ನನ್ನ ಅಕ್ಕ, ಆಕೆಯ ಮಗಳಾದ ಚಾಸಾ.7 ರವರು ಬಂದಿದ್ದರು.

4. ಸಾಕ್ಷಿಯು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದರಲ್ಲಿ ಹೇಮಲತಾಳ ಮೃತ ದೇಹವಿರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಹೇಮಲತಾ ಮೃತಪಟ್ಟ ಸಮಯದಲ್ಲಿ ತೆಗೆದುಕೊಳ್ಳಲಾಗಿದೆ. ನಿಪಿ.3 ಫೋಟೋದಲ್ಲಿ ಪೊಲೀಸರು ಇದ್ದಾರೆ ಮತ್ತು ನಮ್ಮ ಕಡೆಯ ಇಬ್ಬರು ವ್ಯಕ್ತಿಗಳು ಇದ್ದಾರೆ, ಅವರ ಹೆಸರು ನನಗೆ ಈಗ ನೆನಪಾಗುತ್ತಿಲ್ಲ. ಆ ಸಮಯದಲ್ಲಿ ಪೊಲೀಸರು ನನ್ನನ್ನು ವಿಚಾರಿಸಿದರು. ಆಗ ನಾನು ಪೊಲೀಸರಿಗೆ ಆರೋಪಿಯೇ ಹೇಮಲತಾಳಿಗೆ ಇಲಿಯ ಔಷದಿಯನ್ನು ಕುಡಿಸಿ ಸಾಯಿಸಿದ್ದಾನೆ ಎಂದು ಹೇಳಿದೆನು. ನಾನು ವಿದ್ಯಾಭ್ಯಾಸ ಮಾಡಿಲ್ಲ ಹಾಗಾಗಿ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತೇನೆ. ನನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿದರೆ ಗುರುತಿಸುತ್ತೇನೆ.

5. ಸಾಕ್ಷಿಯು ಈಗಾಗಲೇ ನಿಪಿ.1 ಎಂದು ಗುರುತಿಸಲ್ಪಟ್ಟಿರುವ ನೋಟೀಸು ಮತ್ತು ನಿಪಿ.2 ಎಂದು ಗುರುತಿಸಲ್ಪಟ್ಟಿರುವ ಶವ ತನಿಖಾ ಪಂಚನಾಮೆಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತುಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಹೆಬ್ಬೆಟ್ಟಿನ ಗುರುತುಗಳನ್ನು ಹಾಸನದ ಆಸ್ಪತ್ರೆಯಲ್ಲಿ ಹಾಕಿದ್ದೇನೆ. ಹೇಮಲತಾಳಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಅವರನ್ನು ನನ್ನ ಅಕ್ಕನಾದ ಚಾಸಾ.6 ರವರು ಸಾಕಿಕೊಂಡಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

6. ದಿನಾಂಕ 03.06.2018 ರಂದು ಹೇಮಲತಾಳನ್ನು ಹಾಸನದ ಸರ್ಕಾರಿ ಆಸ್ಪತ್ರೆಯಿಂದ ಮಂಗಳ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಲಾಗಿತ್ತು ಎಂದರೆ ಸರಿ. ಆಕೆ ದಿನಾಂಕ 03.06.2018 ರಂದು ರಾತ್ರಿ 11.45 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೇ ಸದರಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾಳೆ ಎಂದರೆ ಸರಿ.

7. ದಿನಾಂಕ 04.06.2018 ರಂದು ಪೊಲೀಸರು ಶವತನಿಖಾ ಪಂಚನಾಮೆಯನ್ನು ಜರುಗಿಸಲು ನನ್ನನ್ನು ಹಾಸನದ ಹಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ಕರೆಸಿಕೊಂಡಿದ್ದರು ಎಂದರೆ ಸರಿ. ಅಲ್ಲಿ ಹೇಮಲತಾಳ ಸಾವಿನ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿದರು ಎಂದರೆ ಸರಿ. ಅಲ್ಲಿ ನನ್ನೊಂದಿಗೆ ಚಾಸಾ.3 ಮತ್ತು 4 ರವರು ಹಾಜರಿದ್ದರು ಎಂದರೆ ಸರಿ.

8. ಆರೋಪಿಯು ಘಟನೆಯ 2 ವರ್ಷಗಳ ಹಿಂದಿನಿಂದ ಪ್ರತೀ ದಿನ ಕುಡಿದುಕೊಂಡು ಬಂದು ತನ್ನ ಹೆಂಡತಿಯಾದ ಹೇಮಲತಾಳಿಗೆ ವಿನಾಃ ಕಾರಣ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡುತ್ತಿದ್ದನು ಎಂದರೆ ಸರಿ. ಆ ಕಾರಣಕ್ಕೆ ಹೇಮಲತಾಳು ಕೋಗಿಲೆಮನೆಯಲ್ಲಿರುವ ತನ್ನ ತವರು ಮನೆಗೆ ಬಂದು ಒಂದು ತಿಂಗಳು ಇದ್ದಳು ಎಂದರೆ ಸರಿ. ನಂತರ ಆರೋಪಿ ಅಲ್ಲಿಗೆ ಹೋಗಿ ಹೇಮಲತಾಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ಕರೆದುಕೊಂಡು ಹೋದನು ಎಂದರೆ ಸರಿ. ನಂತರ 2 ದಿನ ಆರೋಪಿ ಸುಮ್ಮನಿದ್ದು ನಂತರ ಪುನಃ ಕುಡಿದುಕೊಂಡು ಬಂದು ನೀನು ಯಾವುದಾದರೂ ವಿಷದ ಔಷಧಿಯನ್ನು ಕುಡಿದು ಸಾಯಿ, ನಾನು ನೆಮ್ಮದಿಯಾಗಿರುತ್ತೇನೆ ಎಂದು ಯಾವಾಗಲೂ ಬೈಯ್ಯುತ್ತಾ ಹಿಂಸೆ ಕೊಡುತ್ತಿದ್ದನು ಎಂದರೆ ಸರಿ. ಆರೋಪಿ ನೀಡುತ್ತಿದ್ದ ಹಿಂಸೆಯನ್ನು ತಾಳಲಾರದೇ ಬದುಕುವುದೇ ಬೇಡವೆಂದು ದಿನಾಂಕ 07.05.2018 ರಂದು ಆರೋಪಿ ತನ್ನ ಅಜ್ಜಿಯ ತಿಥಿಗೆ ಹೋದ ಸಮಯದಲ್ಲಿ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಹೇಮಾಲತಾಳು ಮನೆಯಲ್ಲಿದ್ದ ಇಲಿ ಪಾಷಾಣವನ್ನು ಸೇವಿಸಿ ರಾತ್ರಿಯವರೆಗೂ ಆ ವಿಚಾರವನ್ನು ಯಾರಿಗೂ ತಿಳಿಸದೇ ರಾತ್ರಿ ಆರೋಪಿ ತಿಥಿ ಕಾರ್ಯಕ್ರಮ ಮುಗಿಸಿ ಮನೆಗೆ ವಾಪಾಸ್ಸು ಹೋದಾಗ ಹೇಮಲತಾ ನರಳುತ್ತಿದುದ್ದನ್ನು ನೋಡಿ ಆತ ಆಕೆಯನ್ನು ಜೀಪಿನಲ್ಲಿ ಮೊದಲಿಗೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ನಂತರ ಅಲ್ಲಿ ವೈಧ್ಯರು ಆಗುವುದಿಲ್ಲವೆಂದು ಹೇಳಿದ ಮೇರೆಗೆ ಆಕೆಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಮಂಗಳ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ ನಂತರ ಚಿಕಿತ್ಸೆ

ಫಲಕಾರಿಯಾಗದೇ ದಿನಾಂಕ 03.06.2018 ರಂದು ರಾತ್ರಿ 11.45 ಗಂಟೆಗೆ ಮೃತಪಟ್ಟಿರುತ್ತಾಳೆ ಎಂದರೆ ಸರಿ.

9. ಆರೋಪಿಯು ಕುಡಿದು ಬಂದು ಗಲಾಟೆ ಮಾಡಿ ಮೃತಳಿಗೆ ನೀಡುತ್ತಿದ್ದ ಹಿಂಸೆಯನ್ನು ತಾಳಲಾರದೆ ಮತ್ತು ಆತ ಆಕೆಗೆ ಪ್ರಚೋದಿಸುತ್ತಿದ್ದುದ್ದರಿಂದ ಹೇಮಲತಾಳು ಇಲಿ ಪಾಷಾಣ ಸೇವಿಸಿ ಆತ್ಮಹತ್ಯೆಮಾಡಿಕೊಂಡಿರುವುದಾಗಿ ತಿಳಿಯಿತು ಎಂದರೆ ಸರಿ.

10. ಶವತನಿಖಾ ಕಾಲದಲ್ಲಿ ನಾನು ಮತ್ತು ಸಹ ಪಂಚರು ಮೇಲಿನಂತೆ ಹೇಮಲತಾಳ ಸಾವಿನ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಿಪಡಿಸಿದೆವು ಎಂದರೆ ಸರಿ. ಆ ಬಗ್ಗೆ ಪೊಲೀಸರು ಅದೇ ದಿನ ಅಂದರೆ ದಿನಾಂಕ 04.06.2018 ರಂದು ಮಧ್ಯಾಹ್ನ 4.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ನಿಪಿ.2 ರಂತೆ ಶವತನಿಖಾ ಪಂಚನಾಮೆಯನ್ನು ಜರುಗಿಸಿ ಅದಕ್ಕೆ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡರು ಎಂದರೆ ಸರಿ.

<u>ಪಾಟೀ ಸವಾಲುಃ ಶ್ರೀ ಜೆ ಕೆ ಎಸ್ ಆರೋಪಿ ಪರ ವಕೀಲರಿಂದಃ</u>

11. ಹೇಮಲತಾಳ ತಾಯಿಯಾದ ಚಾಸಾ.6 ರವರ ಮನೆಗೂ ನಮ್ಮ ಮನೆಗೂ ಸುಮಾರು 25 ಕಿಲೋ ಮೀಟರ್ ದೂರವಿದೆ. ನಾನು ಚಾಸಾ.6 ರವರ ಮನೆಗೆ ಯಾವುದಾದರೂ ಕಾರ್ಯವಿದ್ದರೆ ಮಾತ್ರ ಹೋಗುತ್ತಿದ್ದೆನು ಉಳಿದಂತೆ ಹೋಗುತ್ತಿರಲಿಲ್ಲ. ಚಾಸಾ.6 ರವರ ಮನೆಯಲ್ಲಿ ಆಗು ಹೋಗುವ ವಿಚಾರಗಳು ನನಗೆ ತಿಳಿಯುತ್ತಿರಲಿಲ್ಲ. ಆರೋಪಿಯ ಮನೆಗೂ ನಾನು ಎಂದಿಗೂ ಸಹ ಹೋಗಿಲ್ಲ.

12. ಆರೋಪಿ ಹೇಮಲತಾಳನ್ನು ಮದುವೆಯಾದಾಗಿನಿಂದ ಆಕೆಯನ್ನು ಚೆನ್ನಾಗಿ ನೋಡಿಕೊಂಡು, ಆಕೆಗೆ ಬಟ್ಟೆಗಳನ್ನು ಕೊಡಿಸುವುದು, ಆಸ್ಪತ್ರೆಗೆ ಕರೆದುಕೊಂಡು ಹೋಗುವುದನ್ನು ಮಾಡುತ್ತಿದ್ದನು ಎಂದರೆ ಸಾಕ್ಷಿ ಸರಿ ಎಂದು ನುಡಿದು ನಂತರ ಕುಡಿದುಕೊಂಡು ಬರುತ್ತಿದ್ದನು, ಏನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು ಎನ್ನುತ್ತಾರೆ. ಆರೋಪಿ ತನ್ನ ಮಕ್ಕಳನ್ನು ಹೇಮಲತಾ ಮೃತಪಡುವ ಮೊದಲು ತಾನೇ ಓದಿಸುತ್ತಿದ್ದನು ಎಂದರೆ ಸರಿಯಲ್ಲ. ಹೇಮಲತಾ ಮೃತಪಟ್ಟ ಬಳಿಕವೇ ನಾನು ಆಕೆಯ ಗಂಡನ ಮನೆಗೆ ಹೋಗಿದ್ದೆನು. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಪೊಲೀಸರು ಫೋಟೋಗೆ ನಿಂತುಕೊಳ್ಳಿ ಎಂದು ಹೇಳಿದ್ದರಿಂದ ನಿಪಿ.3 ರಲ್ಲಿ ನಿಂತುಕೊಂಡಿದ್ದೇನೆ.

13. ಹೇಮಲತಾ ಯಾವ ಕಾರಣಕ್ಕೆ ಸತ್ತಳು ಎಂದು ನಿಮಗೆ ನಿರ್ದಿಷ್ಟವಾಗಿ ಗೊತ್ತಿಲ್ಲ ಎಂದರೆ ಸಾಕ್ಷಿ ನಮಗೆ ಅನುಮಾನ ಇದ್ದುದರಿಂದ ಆ ರೀತಿ ಅನುಮಾನವಿದೆ ಎಂದು ಹೇಳಿ ಬರೆಸಿದ್ದೇನೆ ಎನ್ನುತ್ತಾರೆ. ನನ್ನ ಅಕ್ಕನಾದ ಚಾಸಾ.6 ರವರಿಗೆ 16 ರಿಂದ 18 ಎಕರೆ ಜಮೀನು ಇದೆ. ಅದು ಪಿತ್ರಾರ್ಜಿತ ಆಸ್ತಿ. ಹೇಮಲತಾ ತನಗೆ ಸದರಿ ಆಸ್ತಿಯಲ್ಲಿ ಪಾಲು ಬೇಕು ಎಂದು ಕೇಳುತ್ತಿದ್ದಳು ಎಂದರೆ ಸರಿ. ಆದರೆ ನಿಮ್ಮ ಆಕೆಗೆ ಪಾಲು ಕೊಟ್ಟಿರಲಿಲ್ಲ ಎಂದರೆ ಸರಿ. ಆ ವಿಚಾರದಲ್ಲಿ ಹೇಮಲತಾ ನಿಮ್ಮ ಅಕ್ಕನೊಂದಿಗೆ ಜಗಳ ಮಾಡಿಕೊಂಡಿದ್ದಳು ಎಂದರೆ ಸರಿ. ನಂತರ ಹೇಮಲತಾ ನಿಮ್ಮ ಅಕ್ಕನ ಮನೆಗೆ ಬರುವುದನ್ನೇ ನಿಲ್ಲಿಸಿದಳು

ಎಂದರೆ ಸರಿ.

14. ಆರೋಪಿಗೂ ನಿಮ್ಮ ಅಕ್ಕನಾದ ಚಾಸಾ.6 ರವರಿಗೂ ಆಗುವುದಿಲ್ಲ ಎಂದರೆ ಸರಿ. ಮದುವೆಯಾದಾಗಿನಿಂದ ಹೇಮಲತಾ ತನ್ನ ತವರು ಮನೆಗೆ ಹೋಗುತ್ತಿರಲಿಲ್ಲ ಎಂದರೆ ಸರಿ. ಹೇಮಲತಾಗೆ ಆಗಾಗ್ಗೆ ಹೊಟ್ಟೆನೋವು ಬರುತ್ತಿತ್ತು ಎಂದರೆ ಸರಿ. ಆಗ ಆರೋಪಿಯೇ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿದ್ದನು ಎಂದರೆ ಸರಿ. ಹೊಟ್ಟೆ ನೋವಿನಿಂದಾಗಿ ಹೇಮಲತಾ 2-3 ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಳು ಎಂದರೆ ಸರಿ. ಹೊಟ್ಟೆ ನೋವನ್ನು ತಡೆಯಲಾರದೇ ಹೇಮಲತಾ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಆರೋಪಿಯೇ ಹೇಮಲತಾಳಿಗೆ ವಿಷವನ್ನು ಕುಡಿಸಿದ್ದಾನೆ. ಆರೋಪಿ ಕುಡಿಯುತ್ತಿದ್ದ ಎಂದು ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

15. ನಿಮ್ಮ ಅಕ್ಕನ ಮಗಳಾದ ಚಾಸಾ.7 ರವರನ್ನು ನಿಮ್ಮ ಅಕ್ಕ ತಮ್ಮ ಮನೆಯಲ್ಲಿಯೇ ಇರಿಸಿಕೊಂಡಿದ್ದಾರೆ ಎಂದರೆ ಸರಿ. ನಿಮ್ಮ ಅಕ್ಕ ಚಾಸಾ.7 ಭಾರತಿಗೆ ಆಸ್ತಿಯನ್ನು ಕೊಟ್ಟು ಹೇಮಲತಾಳಿಗೆ ಆಸ್ತಿಯನ್ನು ಕೊಡಬೇಕಾಗುತ್ತದೆ ಎಂದು ಆರೋಪಿಯ ಮೇಲೆ ಸುಳ್ಳು ಕೇಸನ್ನು ದಾಖಲಿಸಿದ್ದಾರೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಚಾಸಾ.6 ಮತ್ತು 7 ರವರು ಹೇಳಿಕೊಟ್ಟ ರೀತಿಯಲ್ಲಿ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಮತ್ತು ಸರ್ಕಾರಿ

ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಕುಡಿದು ಬಂದು ಹೇಮಲತಾಳಿಗೆ ಹಿಂಸೆ ಕೊಡುತ್ತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮಗೆ ಘಟನೆಯ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>ಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.